**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್ಃ1050/2021**

ಸಿಡಬ್ಲ್ಯೂಃ 3
ಪಿಡಬ್ಲ್ಯೂಃ 2

| | | |
|---|---|---|
| ಸಾಕ್ಷಿಯ ಹೆಸರು | : | ಎನ್.ಕೆ. ನಿರ್ಮಲ |
| ಗಂಡನ ಹೆಸರು | : | ಸೋಮಶೇಖರ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಡಿ.ಸಿ.ಎಫ್. Social forest research, ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

ಇಂದು ದಿನಾಂಕಃ03.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ನಾನು ಅಕ್ಟೋಬರ್ 2020 ರಿಂದ ಜುಲೈ 2021 ರವರೆಗೆ ಮೂಡಿಗೆರೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿದ್ದೆ.

2. ಚಾಸಾ-2 ರವರು ಈ ಹಿಂದೆ ನಡೆಸಿದ ತನಿಖೆಯ ಸಂಬಂಧ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿತರ ವಿರುದ್ದ ಸೂಕ್ತ ಸಾಕ್ಷ್ಯಧಾರಗಳು ಕಂಡುಬಂದ ಕಾರಣ, ನಾನು ದಿನಾಂಕ.23.06.2021 ರಂದು ಈ ಪ್ರಕರಣದ ಸಂಬಂಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ

3. ಮಹಜರು ಜೊತೆಗೆ ಬೇರೆ ದಾಖಲಾತಿಗಳನ್ನು ತಯಾರು ಮಾಡಿದರೇ ಆ ದಾಖಲಾತಿಗಳಿಗೆ ನಮ್ಮ ಅಧಿಕಾರಗಳು ಸಹಿ ಮಾಡುತ್ತಾರೆ ಎಂದರೆ ಸರಿ. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಮೊದಲು ನಾನು ನಕಾಶೆಯನ್ನು ನೋಡಿರುತ್ತೇನೆ. ಅದನ್ನು ಸ್ಥಳದಲ್ಲಿಯೇ ತಯಾರಿಸಿರುವ ಬಗ್ಗೆ ಅದರಲ್ಲಿ ನಮೂದು ಇಲ್ಲ. ಮಹಜರಿನಲ್ಲಿ ಸಹಿ ಮಾಡಿರುವ ಎಲ್ಲಾ ವ್ಯಕ್ತಿಗಳು ನಕಾಶೆಯಲ್ಲಿ ಸಹಿ ಮಾಡಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು, ನಕಾಶೆಯನ್ನು ತಯಾರಿಸಿರುವವರು ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಕಾಶೆಯನ್ನು ಯಾರು ತಯಾರು ಮಾಡಿದ್ದಾರೆ ಎಂದು ನಮೂದು ಇಲ್ಲ ಎಂದರೆ ಸರಿ. ದೋಷಾರೋಪಣಾ ಪಟ್ಟಿ ಸಲ್ಲಿಸುವ ಮೊದಲು ನಾನು ಈ ಪ್ರಕರಣದಲ್ಲಿ ಜಪ್ತು ಮಾಡಿಕೊಂಡ ಜಿಂಕೆ ಕೊಂಬೆಗಳನ್ನು ನೋಡಿರುತ್ತೇನೆ. ಯಾವುದಾದರು ವಸ್ತುಗಳನ್ನುಜಪ್ತು ಮಾಡಿಕೊಂಡರೇ ಅದರ ಮೇಲೆ ಪ್ರಕರಣದ ಸಂಖ್ಯೆಯನ್ನು ಗುರುತಿಗೋಸ್ಕರ ನಮೂದಿಸುತ್ತಾರೆ ಎಂದರೆ ಸರಿ. ಫೋಟೋಗಳಲ್ಲಿ ಕಾಣುವ ಜಿಂಕೆ ಕೊಂಬೆಗಳ ಮೇಲೆ ಎಫ್.ಓ.ಸಿ ನಂಬರ್ ಕಾಣುತ್ತಿಲ್ಲ

ಎಂದರೆ ಸರಿ. ನಾನು ನೋಡಿದ ವಸ್ತುಗಳ ಮೇಲೆ ಕ್ರಮ ಸಂಖ್ಯೆ ನೀಡಿದ ಬಗ್ಗೆ ಈಗ ನನಗೆ ನೆನಪಿಲ್ಲ. ವಸ್ತುಗಳನ್ನು ಜಪ್ತು ಮಾಡಿಕೊಂಡು ಕ್ರಮ ಸಂಖ್ಯೆ ನೀಡಿದರೇ ಸೀರಿಯಲ್ ಆಗಿ ನೀಡುತ್ತಾರೆ ಎಂದರೆ ಸರಿ. ಫೋಟೋಗಳಲ್ಲಿ ಕ್ರಮ ಸಂಖ್ಯೆ.3 ಎಂದು ನೀಡಿರುವ ವಸ್ತು ಕಾಣುತ್ತಿಲ್ಲ ಎಂದರೆ ಸರಿ. ಸ್ಕೂಟರ್ ಇರುವ ಫೋಟೋದಲ್ಲಿ ಸಹ ಕ್ರಮ ಸಂಖ್ಯೆ.3 ಕಾಣುತ್ತಿಲ್ಲ ಎಂದರೆ ಸರಿ.

4. ನಾನು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಮೊದಲು ಈ ಪ್ರಕರಣದಲ್ಲಿ ಜಪ್ತು ಮಾಡಿಕೊಳ್ಳಲಾದ ತೋಟಾಗಳು ಎಷ್ಟು ವರ್ಷಗಳ ಹಿಂದೆ ಫೈರ್ ಆಗಿದ್ದು ಎಂದು ತಿಳಿದುಕೊಳ್ಳಲು ಎಫ್.ಎಸ್.ಎಲ್ ಗೆ ಕಳುಹಿಸಿಲ್ಲ. ಕ್ರಮ ಸಂಖ್ಯೆಗಳನ್ನು ಫೋಟೋಗಳ ಬರೆಯಲಾಗಿದೆ ಎಂದರೆ ಸಾಕ್ಷಿಯು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರ ವಿರುದ್ಧ ನಮ್ಮ ಇಲಾಖೆಯ ಅಂಕಿ ಅಂಶಗಳಿಗೋಸ್ಕರ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಮೇಲಾದಿಕಾರಿಗಳ ಒತ್ತಡಕ್ಕ ಒಳಪಟ್ಟು ಈ ರೀತಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ